ಕಲ್ಪನೆಯನ್ನು ಪ್ರಸ್ತಾಪಿಸುವುದು ಕೂಡ ಮುಖ್ಯ. 'ಶ್ರೇಷ್ಠತೆಯ ಕಲ್ಪನೆಯನ್ನು ಸಾರಾಸಗಟು ತಳ್ಳಿ ಹಾಕುವುದಾಗಲಿ, ಅದನ್ನು ವಿಪರ್ಯಾಸಗೊಳಿಸಿ ಲೇವಡಿ ಮಾಡುವುದಾಗಲಿ ಖಂಡಿತ ನನ್ನ ಉದ್ದೇಶವಲ್ಲ. ಕಣ್ಣು ಪಟ್ಟಿ ಕಟ್ಟಿಕೊಂಡ ಶ್ರೇಷ್ಠತೆಯ ವ್ಯಸನ, ಅದೆಂಥೆಂಥ ವಿಕಾರಗಳನ್ನು ಸೃಷ್ಟಿಸಿದೆ ಎನ್ನುವುದನ್ನು ಗಮನಿಸಿಕೊಳ್ಳುವುದು ಮತ್ತು ಆ ಬಗ್ಗೆ ಎಚ್ಚರವಾಗಲು ಪ್ರಯತ್ನಿಸುವುದು ನನ್ನ ಅಪೇಕ್ಷೆ' ಎಂದು ಸುಬ್ಬಣ್ಣನವರು ಹೇಳಿದ್ದು ಗಂಭೀರ ಚಿಂತನೆಯ ಒಂದು ಆಕರವಾಗಿದೆ. ಅವರು 'ಅದೆಂಥೆಂಥ ವಿಕಾರಗಳನ್ನು ಸೃಷ್ಟಿಸಿದೆ' ಎನ್ನುತ್ತಾರಲ್ಲ, ಆ ವಿಕಾರಗಳಲ್ಲಿ 'ಸೊಕ್ಕು' ಕೂಡ ಒಂದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಶ್ರೇಷ್ಠತೆಯ ಸೊಕ್ಕಿನಲ್ಲಿ ಇರುವ ಸಾಮಾಜಿಕ ಶ್ರೇಣಿಯ ಆಯಾಮವನ್ನು ನಾನು ಪ್ರಸ್ತಾಪಿಸಿದೆ. ಇದು ಕೇವಲ ಒಂದು ಬೀಸು ಹೇಳಿಕೆಯಲ್ಲ ಎಂಬುದಕ್ಕೆ ಕೆಲವು ಸಂಶೋಧನೆಗಳ ಸಮರ್ಥನೆಯಿದೆ. ಶ್ರೇಷ್ಠತೆಯ ಮೂಲವನ್ನು ಕುರಿತು ಮೊಟ್ಟಮೊದಲಿಗೆ ಬ್ರಿಟನ್ನಿನ ಫ್ರಾನ್ಸಿಸ್ ಗಾಲ್ಟನ್ 'Hereditary genius' ಎಂಬ ಪುಸ್ತಕವನ್ನು 1869ರಲ್ಲಿ ಬರೆದಾದ ಮೇಲೆ ಅನೇಕ ಚರ್ಚೆ-ಚಿಂತನೆಗಳು ನಡೆದಿವೆ. ಗಾಲ್ಟನ್ ಅವರು ಶ್ರೇಷ್ಠತೆ ಮತ್ತು ಆನುವಂಶಿಕತೆಯ ಸಂಬಂಧವನ್ನು ನಿರೂಪಿಸುತ್ತಾರೆ. 1926ರಲ್ಲಿ ಕ್ಯಾಥರಿನ್ ಕಾಕ್ಸ್ ಎಂಬ ಚಿಂತಕ, ಮುನ್ನೂರು ಜನ ಸಾಧಕರ ಶ್ರೇಷ್ಠ ಬುದ್ಧಿಮತ್ತೆ ಕುರಿತು ಅಧ್ಯಯನ ಮಾಡಿದರು. 1944ರಲ್ಲಿ ಸಮಾಜ ವಿಜ್ಞಾನಿ ಕ್ರೋಬರ್, ಸಾಮುದಾಯಿಕ ಸಂಸ್ಕೃತಿಯು ವ್ಯಕ್ತಿಯ ಮೇಲೆ ಬೀರುವ ಪ್ರಭಾವದ ಹಿನ್ನೆಲೆಯಲ್ಲಿ ಶ್ರೇಷ್ಠತೆಯ ಚರ್ಚೆ ಮಾಡಿದರು. ಇದು ಆನುವಂಶಿಕತೆಯಿಂದ ಹೊರಬಂದ ಹೊಸ ಚಿಂತನೆ. ಇನ್ನೊಬ್ಬ ಸಮಾಜ ವಿಜ್ಞಾನಿ ಜುಕರ್‌ಮ್ಯಾನ್ ಅನೇಕ ಗಣ್ಯಸಾಧಕರ ವೃತ್ತಿ ಜೀವನ ಕುರಿತು ಅಧ್ಯಯನ ಮಾಡಿದರು. ಬಿಲ್ ಡೋರಿಸ್ (2009ರಲ್ಲಿ) ಜೆನಿಟಿಕ್ಸ್‌ನಿಂದ ಸಾಂಸ್ಕೃತಿಕ ಬಿಕ್ಕಟ್ಟುಗಳವರೆಗಿನ ಅಂಶಗಳನ್ನು ವಿಶ್ಲೇಷಣೆ ಮಾಡಿದರು. ಶ್ರೇಷ್ಠ ಸಾಧಕರು ಸಮಾಜದ ಸಮಸ್ಯೆಗಳನ್ನು ಪರಿಹರಿಸುವ ಮನೋಧರ್ಮದವರೆಂದು ಹೇಳುತ್ತ, ಅಂಥ ಸಾಧಕರಿಗೆ ನಿದರ್ಶನವಾಗಿ ಆಲ್ಬರ್ಟ್ ಐನ್‌ಸ್ಟೀನ್, ನ್ಯೂಟನ್ ರೀತಿಯ ವ್ಯಕ್ತಿಗಳನ್ನು ಉದಾಹರಿಸುತ್ತಾರೆ. ಸಾಧಕರು ಅನುವಂಶಿಕತೆಯಿಂದ ಪ್ರಭಾವಿತರಾದರೂ, ಆನಂತರ ಅದನ್ನು ಮೀರಿ ಪರಿಣತಿ ಪಡೆಯುತ್ತಾರೆಂಬುದು ಇವರ ಅಭಿಮತ. ಅರಿಸ್ಟಾಟಲ್ ಪ್ರಕಾರ ಎರಡು ರೀತಿಯ ಉತ್ಕೃಷ್ಠತೆ (ಶ್ರೇಷ್ಠತೆ) ಇರುತ್ತದೆ. ಒಂದು- ಬೌದ್ಧಿಕ, ಇನ್ನೊಂದು- ನೈತಿಕ. ಒಂದನೆಯದು ಕಾಲಾನುಕ್ರಮದ ಅನುಭವದಿಂದ ಸಾಧ್ಯವಾಗುತ್ತದೆ. ಎರಡನೆಯದು ಸ್ವಭಾವದಲ್ಲಿ ಪ್ರತಿಫಲಿಸುತ್ತದೆ. ಒಟ್ಟಾರೆ ಈ ಎಲ್ಲರ ವಿಚಾರಗಳನ್ನು ಕ್ರೋಡೀಕರಿಸುವುದಾದರೆ, ಶ್ರೇಷ್ಠತೆಯೆನ್ನುವುದು ಅನುವಂಶಿಕತೆ ಮತ್ತು ಸಾಮಾಜಿಕತೆಗಳ ಫಲಿತವಾಗಿರುತ್ತದೆ. ನನಗನ್ನಿಸುವುದು ಅನುವಂಶಿಕ ಮೂಲದ ಶ್ರೇಷ್ಠತೆಯು ಶ್ರೇಣೀಕರಣದ ತಾರತಮ್ಯವನ್ನು ಒಳಗೊಂಡಿರುತ್ತದೆ. ಸಾಮಾಜಿಕತೆ ಮೂಲದ ಶ್ರೇಷ್ಠತೆಯು ವ್ಯಕ್ತಿಯ ಸಾಮಾಜಿಕ ಸಂಬಂಧಗಳನ್ನು ಪರಿಗಣಿಸಿದ ದೃಷ್ಟಿಕೋನವಾಗಿರುತ್ತದೆ. 'ಕಲೆಗಳಿಗೆ ಸಂಬಂಧಿಸಿದ ಸೌಂದರ್ಯಾಭಿರುಚಿಯ ಜೈವಿಕ ಮತ್ತು ಸಮಾಜೋ-ಚಾರಿತ್ರಿಕ ಸಂದರ್ಭದ ಪ್ರಭಾವದಿಂದ ನಿಯಂತ್ರಿತವಾಗಿರುತ್ತದೆ ಮತ್ತೂ ಶುದ್ಧ ಸೌಂದರ್ಯವೆನ್ನುವುದು ಸ್ವತಂತ್ರ ಕಲ್ಪನೆಯಲ್ಲ' ಎಂದು ರಷ್ಯಾದ ಚಿಂತಕ ಪ್ಲಖನೋವ್ ಅವರು ವಿಶ್ಲೇಷಣೆ ಮಾಡಿರುವುದು ಈ ಚರ್ಚೆಗೆ ಪೂರಕವಾಗಿದೆ. (Art and Social life).

ಶ್ರೇಷ್ಠತೆಯ ಕಲ್ಪನೆಯನ್ನು ನಾವು ನಿರಾಕರಿಸಬೇಕಿಲ್ಲ. ಆದರೆ, ಶ್ರೇಷ್ಠತೆಯು ಆಗಿಹೋದ ಹಂತವಲ್ಲ; ಆಗಬೇಕಾದ ಆದರ್ಶ ಪ್ರಕ್ರಿಯೆ. ಆದ್ದರಿಂದ ಶ್ರೇಷ್ಠವೆಂಬ 'ಸ್ಥಾನ'ದಲ್ಲಿ ನಿಂತು ನಮ್ಮ ಸಮಾಜ ಮತ್ತು ಸಂಸ್ಕೃತಿಗಳನ್ನು ಕಟ್ಟಿಕೊಟ್ಟ ಚರಿತ್ರೆಯ ವಿವಿಧ ಹಂತಗಳ ಮಹತ್ವವನ್ನು ಮರೆಯಬಾರದು, ಮರೆಸಬಾರದು. ವಿವಿಧ ಹಂತಗಳ ಕ್ರಿಯಾ ಕೊಂಡಿಗಳು ಪರಸ್ಪರ ಕೂಡಿಕೊಂಡ ಒಂದು ಪ್ರಕ್ರಿಯೆಯಾಗಿ ಚಾರಿತ್ರಿಕ ಸಾಧನೆಯನ್ನು ಕಂಡುಕೊಳ್ಳಬೇಕು.

ನಮಗೆ ಶ್ರೇಷ್ಠತೆಯ ಸೊಕ್ಕು ಬೇಡ; ಶ್ರೇಷ್ಠತೆಯ ಸೋಗು ಬೇಡ. ಶ್ರೇಷ್ಠತೆಯೆನ್ನುವುದು ಒಂದು ಶೋಧ. ಈ ಶೋಧ ಒಂದು ನಿರಂತರ ಪ್ರಕ್ರಿಯೆ. ಒಳಗೆ ಕಟ್ಟಿಕೊಳ್ಳುತ್ತ, ಹೊರಗೆ ಕಟ್ಟುತ್ತ, ಚಲಿಸುತ್ತ, ಇರುವ ಪ್ರಕ್ರಿಯೆ.

●